ಶ್ರೀಮತಿ ಸುಮಾ ವಸಂತ್.—ಮಾನ್ಯ ಅಧ್ಯಕ್ಷರೇ, ಈಗ ಜಿಲ್ಲಾ ಅಭಿವೃದ್ಧಿಗೆ ಬರುವ ಅರ್ಧ ದಷ್ಟು ಹಣವನ್ನು ಫಾರೆಸ್ಟ್ ಬೆಳೆಸುವುದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆ ಅರಣ್ಯ ಸಂಪತ್ತಿನ ನಾಶದಲ್ಲಿ ಬಹಳ ದೊಡ್ಡ ಜಾಲ ಅಡಗಿದೆ ಎಂದು ನನ್ನ ಅನಿಸಿಕೆ. ಐದು ವರ್ಷದವರೆಗೆ ಗುತ್ತಿಗೆಯನ್ನು ನವೀಕರಣ ಮಾಡಿದ್ದು ಯಾವ ಕಾರಣಕ್ಕೋಸ್ಕರ ಎಂದು ಕೇಳುತ್ತಿದ್ದೇನೆ. ಉಡುಂಬೆ ಒಂದು ಅರಣ್ಯ ಪ್ರದೇಶ, ಹಾಗೆಯೇ ಭಾಗಮಂಡಲ, ಕರ್ಕೆ ಮುಂತಾದ ಕಡೆಗಳಲ್ಲಿ ಮರ ಕಡಿಯುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಇತ್ತೀಚೆಗೆ ಕೊಡಗಿನಲ್ಲಿ ಯಾವುದೇ ಫ್ಯಾಕ್ಟರಿಗೆ ಮರ ಕಡಿಯುವುದಕ್ಕೆ ಅನುಮತಿ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಮರಗಳೇ ಇಲ್ಲ. ಮುಂದಿನ ನಲವತ್ತು ವರ್ಷಗಳಲ್ಲಿ ಕಡಿಯಲು ಬಹುದಾದಷ್ಟು ಮರಗಳನ್ನು ಈಗಲೇ ಕಡಿದು ಮುಗಿಸಿದ್ದಾರೆ. ಈಗಾಗಲೇ ಶೇಕಡಾ ೮೦ ರಷ್ಟು ಅರಣ್ಯ ಪ್ರದೇಶವನ್ನು ಕಡಿದು ಮುಗಿಸಿದ್ದಾರೆ. ಇನ್ನು ಕೇವಲ ಶೇಕಡಾ ೨೦ ರಷ್ಟು ಅರಣ್ಯ ಪ್ರದೇಶ, ಮಾತ್ರ ಉಳಿದಿದೆ. ಸರಕಾರ ಈಗ ಕೂಡಲೇ ಕೊಡಗಿನ ಅರಣ್ಯ ಪ್ರದೇಶದಲ್ಲಿ ಯಾವುದೇ ಮರವನ್ನು ಕಡಿಯಲು ಅನುಮತಿ ಕೊಡಬಾರದು ಹಾಗೂ ಈಗ ಕೊಟ್ಟಿರತಕ್ಕಂಥ ಗುತ್ತಿಗೆಯನ್ನು ಕೂಡಲೇ ರದ್ದು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ೭-೨-೮೭ ರಿಂದ ಮರಗಳನ್ನು ಕಡಿಯಬಾರದೆಂದು ಆದೇಶ ಕೊಟ್ಟಿದ್ದೇವೆ. ಅನೇಕ ಟಿಂಬರ್ ಫ್ಯಾಕ್ಟರಿಗಳು ನಿಂತಿವೆ. ಮಡಿಕೇರಿ ಜಿಲ್ಲೆಯಲ್ಲಿ ಒಟ್ಟು ೯೧ ಟಿಂಬರ್ ಫ್ಯಾಕ್ಟರಿಗಳು ಇವೆ. ಅವರೆಲ್ಲರೂ ಈಗ ಗಲಾಟೆ ಮಾಡುತ್ತಿದ್ದಾರೆ. ನಾವು ಅವರಿಗೆ ಮತ್ತೆ ಪರ್ಮಿಶನ್ ಕೊಡಬೇಕಾದರೆ ಅವರಿಗೆ ಯಾವ ರೀತಿಯಲ್ಲಿ ಅಗ್ರಿಮೆಂಟ್ಸ್ ಹಿಂದೆ ಆಗಿದ್ದವು ಎನ್ನುವುದನ್ನು ನೋಡಿ, ಕ್ಯಾಬಿನೇಟ್‌ನಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ತದನಂತರ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ತೀರ್ಮಾನ ಮಾಡುತ್ತೇನೆ. ಈಗ ರಿಜರ್ವ್ ಫಾರೆಸ್ಟ್ ಅನ್ನು ಕಡಿಯುವುದಕ್ಕೆ ಅನುಮತಿ ಕೊಟ್ಟಿಲ್ಲ. ಈ ಬಗ್ಗೆ ಏನು ತೀರ್ಮಾನ ಸರ್ಕಾರ ತೆಗೆದುಕೊಳ್ಳುತ್ತದೆಯೋ ಅದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನು ಎರಡು ಮೂರು ದಿವಸಗಳಲ್ಲಿಯೇ ತಿಳಿಸಲಾಗುವುದು.

ಶ್ರೀಮತಿ ಸುಮಾವಸಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಿಜರ್ವ್ ಫಾರೆಸ್ಟ್ ಅನ್ನು ಕಡಿಯುವುದಕ್ಕೆ ಅನುಮತಿ ಕೊಡುವುದಿಲ್ಲವೆಂದು ಹೇಳಿದರು. ಆದರೆ ಆ ಫ್ಯಾಕ್ಟರಿಗಳ ಮಾಲೀಕರು ವಿಧಾನ ಸೌಧದ ಸುತ್ತಲೂ ಬಂದೂ ಸುತ್ತಾಡುತ್ತಿದ್ದಾರೆ. ಈಗ ಅಸೆಂಬ್ಲಿ ನಡೆಯುತ್ತಿದೆ. ಆದ್ದರಿಂದ ನೀವು ಮರಗಳನ್ನು ಕಡಿಯುವುದಕ್ಕೆ ಆದೇಶ ಕೊಟ್ಟಿಲ್ಲ. ಅಸೆಂಬ್ಲಿ ಮುಗಿದ ತಕ್ಷಣ ಮತ್ತೆ ಪರ್ಮಿಶನ್ ಕೊಡುತ್ತೀರಿ. ಆದ್ದರಿಂದ ಸರ್ಕಾರ ಪಶ್ಚಿಮಘಟ್ಟಗಳ ಕಾಡನ್ನು ಕಡಿಯಲಂ ಪರ್ಮಿಶನ್ ಕೊಡುವುದಿಲ್ಲವೆಂದು ಸ್ಪಷ್ಟವಾದ ಭರವಸೆಯನ್ನು ನನಗೆ ಕೊಡಬೇಕು

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ನಾವು ಯಾರಿಗೂ ತಾರತಮ್ಯ ಮಾಡುವುದಿಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ತಾರತಮ್ಯ ಮಾಡುತ್ತೀರೆಂದು ಮಾನ್ಯ ಸದಸ್ಯರೇಯಾರು ಹೇಳಲಿಲ್ಲ. ಫ್ಯಾಕ್ಟರಿಗಳವರು ವಿಧಾನ ಸೌಧದ ಸುತ್ತಲೂ ಸುತ್ತಾಡುತ್ತಿದ್ದಾರೆ. ವಿಧಾನ ಸಭೆಯಲ್ಲಿ ಮುಗಿದ ತಕ್ಷಣ ನೀವು ಅವರಿಗೆ ಮರ ಕಡಿಯಲು ಪರ್ಮಿಶನ್ ಕೊಡುತ್ತೀರೆಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ಉತ್ತರ ಹೇಳಿ...

ಶ್ರೀ ಜೆ. ಎಸ್. ದೇಶಮುಖ್.—ನಾನು ಈಗಾಗಲೇ ಹೇಳಿದ್ದೇನೆ.

ಹುಬ್ಬಳ್ಳಿಯ ಭೂರೂಕಾ ಟೆಕ್ಸ್‌ಟೈಲ್ಸ್ ಮಿಲ್‌ನ ಕಾರ್ಮಿಕರ ಮೇಲೆ ಭದ್ರತಾ ಪಡೆಯವರು ಗುಂಡುಹಾರಿಸಿರುವುದು

ಶ್ರೀ ಎನ್. ಎಂ. ಜಡ್ಕಂತಾಯ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯ ಭೂರೂಕಾ ಟೆಕ್ಸ್‌ಟೈಲ್ಸ್ ಮಿಲ್‌ನ ಕಾರ್ಮಿಕರ ಮೇಲೆ ಭದ್ರತಾ ಪಡೆಯವರು ಗುಂಡುಹಾರಿಸಿದ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಜಯ್ಯ.—ಮಾನ್ಯ ಅಧ್ಯಕ್ಷರೇ, ಕಾರ್ಮಿಕರಿಗೂ ಮಂತ್ರಿ ಮಾಲೀಕರ ನಡುವೆ ಒಂದು ಒಪ್ಪಂದ ಏರ್ಪಡುವ ಸಂದರ್ಭ ಇದೆ. ಇವರಿಬ್ಬರ ನಡುವೆ ಒಂದು ಸಮಾಧಾನಕರವಾದಂಥ ರೀತಿಯಲ್ಲಿ ಒಪ್ಪಂದವಾಗುವ ನಿರೀಕ್ಷೆ ಇದೆಯೆಂದು ಮಾನ್ಯ ರವಿನ್ಯಾ ಮಂತ್ರಿಗಳು ಈಗತಾನೆ ನನಗೆ ಹೇಳಿದರು. ಆದ್ದರಿಂದ ಆ ಬಗ್ಗೆ ಪೂರ್ಣ ಪ್ರಮಾಣದ ತನಿಖೆಯನ್ನು ಈಗ ನಡೆಸುವುದಕ್ಕೆ ಸಾಧ್ಯವಿಲ್ಲ. ಆ ಒಪ್ಪಂದವೇನಾಗುತ್ತದೆ ಎಂಬುದನ್ನು ನೋಡಿಕೊಂಡು ನಾನು ಈ ಸಭೆಯು ಮುಂದೆ ಒಂದು ಹೇಳಿಕೆಯನ್ನು ಮಾಡುತ್ತೇನೆ.

ಅಧ್ಯಕ್ಷರು.—ನಾಳೆ ಮಾಡುತ್ತೀರಾ ?

ಶ್ರೀ ಬಿ. ರಾಜಯ್ಯ.—ತಾವು ಸಹ ಅಲ್ಲಿ ಒಬ್ಬ ಕಾರ್ಮಿಕ ಮುಖಂಡರಿದ್ದೀರಿ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ನಾನು ಸೋಮವಾರ ಅಥವಾ ಮಂಗಳವಾರ ಇರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಮುಖಂಡರ ಮತ್ತು ಮಾಲೀಕರ ನಡುವೆ ಒಂದು ಚರ್ಚೆಯಾಗುತ್ತಿದೆ. ಅವರು ಒಂದು ಒಪ್ಪಂದಕ್ಕೆ ಬಂದರೂ ಬರಬಹುದು. ಇವತ್ತು ಲೇಬರ್ ಕಮಿಷನರ್ ಮುಂದೆ ಮಾತುಕತೆಗಳು ನಡೆಯುತ್ತಿವೆ. ಆ ಬಗ್ಗೆ ಸರ್ಕಾರ ಇನ್ನೊಂದು ವಾರದಲ್ಲಿ ವಿವರವಾದ ಹೇಳಿಕೆಯನ್ನು ಕೊಡುತ್ತದೆ.

ನಿಯಮ 334ರ ಮೇರೆಗೆ

ಶಹಬಾದಿನ ಎಬಿಎಲ್ ಕಾರ್ಖಾನೆಯವರು ಕಾರ್ಖಾನೆ ಮುಚ್ಚಲು ಬೊಂಬಾಯಿ ಹೈಕೋರ್ಟಿಗೆ ಮನವಿ ಸಲ್ಲಿಸಿರುವುದು.

ಶ್ರೀ ಯು. ಭೂಪತಿ (ಶ್ರೀ ಕೆ. ಬಿ. ಶಾಣಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಶಹಬಾದ್‌ನಲ್ಲಿ ಎಬಿಎಲ್ ಕಾರ್ಮಿಕರು ಮುಷ್ಕರ ಹೂಡಿದ ನಂತರ ಪುನಃ ಕಾರ್ಖಾನೆ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಯಿತು. ಆದರೆ ಎಬಿಎಲ್ ಮಾಲೀಕರು ಬಾಂಬೆ ಹೈಕೋರ್ಟಿನಲ್ಲಿ ಲಿಕ್ವಿಡೇಶನ್‌ಗೆ ಅರ್ಜಿಯನ್ನು ಹಾಕಿ ಕಂಪನಿಯನ್ನೇ ಮುಚ್ಚಿಬಿಡುವಂತೆ ಪರವಾನಿಗೆಯನ್ನು ಕೇಳಿದ್ದಾರೆ. ಈ ಮಧ್ಯೆ ಎಲ್ಲಿನ ಕಾರ್ಮಿಕರ ಸಂಘಟನೆ ಎಲ್ಲಾ ಪಕ್ಷದ ರಾಜಕೀಯ ಮುಖಂಡರು ಮಾನ್ಯ ಕಾರ್ಮಿಕ ಮಂತ್ರಿಗಳಿಗೂ ಮುಖ್ಯಮಂತ್ರಿಗಳೂ ಪ್ರಧಾನ ಮಂತ್ರಿಯವರಿಗೂ ಪತ್ರ ಬರೆದು ಈ ಬಗ್ಗೆ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಬಿಹೆಚ್‌ಇಎಲ್ ನಿಂದ ಆರ್ಡರ್ ಅನ್ನು ಕೊಡಬೇಕೆಂದು ಒತ್ತಾಯ ಮಾಡಲಾಯಿತು. ಆದಲ್ಲದೆ ಈ ಕಾರ್ಖಾನೆ ದುರ್ಗಾಪುರದ ಕಾರ್ಖಾನೆ ಮತ್ತು ಶಹಬಾದ್‌ನ ಕಾರ್ಖಾನೆಗಳು ಮುಚ್ಚಲ್ಪಡಂತೆ ಮಾನ್ಯ ಜ್ಯೋತಿ ಬಸುರವರು ಹಾಗೂ ಅಲ್ಲಿಯ ಎಲ್ಲಾ ಪಕ್ಷದ ನಾಯಕರುಗಳ ಪ್ರಯತ್ನದಿಂದ ಈಗ ಒಂದು ಒಪ್ಪಂದಕ್ಕೆ ಬಂದಿದೆಯೆಂದು ತಿಳಿದು ಬಂದಿದೆ. ನಮ್ಮ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಸುಮಾರು ೧೮೦೦ ಕಾರ್ಮಿಕರನ್ನು ರಕ್ಷಿಸಬೇಕೆಂದು ಕೇಳಿ ಸುಮಾರು ೬ ತಿಂಗಳುಗಳಿಂದ ಈ ಕಾರ್ಖಾನೆಯು ಕಾರ್ಮಿಕರಿಗೆ ಸಂಬಳವಿಲ್ಲದೆ ಅನೇಕರು ಒಡವೆ ವಸ್ತ್ರಗಳನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ತಕ್ಷಣ ಸರ್ಕಾರ ಆ ಮಾಲೀಕರ ಜೊತೆಯಲ್ಲಿ ಮಾತನಾಡಿ ಪ್ರತಿಯೊಬ್ಬ ಕಾರ್ಮಿಕರಿಗೂ ಮುಂಗಡ ಹಣವನ್ನಾಗಿ ಕೊಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ಶಹಬಾದಿನಲ್ಲಿರುವ ಎ. ಬಿ. ಎಲ್. ಬಾಬ್‌ಕಾಕ್‌ನ ಕಾರ್ಮಿಕರಿಗೆ ವೇತನ ಕೊಡದಿರುವ ಬಗ್ಗೆ ಈ ಕೆಳಕಂಡ ಹೇಳಿಕೆ ಮಾಡುತ್ತೇನೆ.

ಈ ವಿಚಾರದಲ್ಲಿ ಗುಲ್ಬರ್ಗಾ ವಿಭಾಗದ ಕಾರ್ಖಾನೆಗಳ ಪರಿವೀಕ್ಷಕರು ಮಂಜೂರು ಸಂದಾಯ ಅಧಿನಿಯಮ ೧೯೩೬ರ ಪ್ರಕರಣ ೧೫(೩)ರಲ್ಲಿ ಸದರಿ ಕಾರ್ಖಾನೆಯ ಸುಮಾರು ೨೦೦೦ ಕೆಲಸಗಾರರಿಗೆ ದಿನಾಂಕ ೧-೧೧-೧೯೮೬ ರಿಂದ ೩೧-೧೨-೧೯೮೬ರ ಅವಧಿಗೆ ಸಂದಾಯವಾಗಬೇಕಾದ ವೇತನದ ಬಾಕಿಗೆ ಸಂಬಂಧಿಸಿದಂತೆ ದಿನಾಂಕ ೨೪-೧-೧೯೮೭ರಂದು ಗುಲ್ಬರ್ಗಾ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ದೂರು ದಾಖಲು ಮಾಡಿರುತ್ತಾರೆ.